# ಸೊಂಟದಂತಹ ರಟ್ಟೆ!

ಈಜಿಪ್ಟ್ ದೇಶದ ಈತ ಪೈಲ್ವಾನ್ ಮುಸ್ತಫಾ ಇಸ್ಮಾಯಿಲ್. ವಯಸ್ಸು 24. ಈತನ ರಟ್ಟೆಯ ಗಾತ್ರ 31 ಅಂಗುಲ! ಇದು ಪೂರ್ಣ ಬೆಳೆದ ಸಾಮಾನ್ಯ ಮನುಷ್ಯನ ಟೊಂಕದ ಗಾತ್ರಕ್ಕೆ ಸಮ.! ಈಗ ಈತನೇ ಜಗತ್ತಿನ ಅತಿ ದಪ್ಪ ರಟ್ಟೆಯ ಮನುಷ್ಯ. ಹಾಗೆಂದು ಗಿನ್ನೆಸ್ ದಾಖಲೆಯ ಅಧಿಕಾರಿಗಳು ದೃಢಪಡಿಸಿದ್ದಾರೆ. ಈತ 2013ರ ಗಿನ್ನೆಸ್ ಪುಸ್ತಕದಲ್ಲಿ ದಾಖಲಾಗಲಿದ್ದಾನೆ.

ಮುಸ್ತಫಾ ಈಗ ತನ್ನ ದೇಶ ಬಿಟ್ಟು ಹೆಂಡತಿಯೊಂದಿಗೆ ಅಮೆರಿಕಾದ ಕೆರೋಲಿನಾದಲ್ಲಿ ವಾಸಿಸುತ್ತಿದ್ದಾನೆ. ದೇಹದಾರ್ಢ್ಯ ಹೆಚ್ಚಿಸುವ ಪರಿಕರಗಳು ಅಮೆರಿಕಾದಲ್ಲಿ ಹೆಚ್ಚು ಲಭ್ಯ ಎಂಬುದೇ ಇದಕ್ಕೆ ಕಾರಣ. ಬಾಡಿ ಬಿಲ್ಡಿಂಗ್‌ಗಾಗಿ ಆತ ಎಲ್ಲಿ ಬೇಕಾದರೂ ಹೋಗಲು ಸಿದ್ಧ. ಏನು ಬೇಕಾದರೂ ಮಾಡಲು ತಯಾರು. ಕಳೆದ ಹತ್ತು ವರ್ಷಗಳಿಂದ ದೇಹ ಬೆಳೆಸುವ–ಬಲಗೊಳಿಸುವ ಕಾಯಕದಲ್ಲಿ ಈತ ನಿರತ. ಈತನ ತಂದೆಯೂ ಕುಸ್ತಿ ಪೈಲ್ವಾನ್‌ನಾಗಿದ್ದರು. ರಕ್ತಗತವಾಗಿಯೇ ಆ ಅಂಶ ಈತನಲ್ಲೂ ಬಂದಿದೆ; ಅಷ್ಟೇ ಅಲ್ಲ ತಂದೆಯೇ ಈತನಿಗೆ ಪ್ರೇರಣೆಯೂ ಕೂಡ.

ಪ್ರತಿನಿತ್ಯ ಮುಂಜಾನೆ ಹಾಗೂ ಸಂಜೆ ಮೂರು ಮೂರು ಗಂಟೆ ಈತ ತಾಲೀಮು ಮಾಡುತ್ತಾನೆ. 500 ಪೌಂಡ್ ಅಂದರೆ 226.8 ಕಿಲೋ ಭಾರವನ್ನು ಎತ್ತಿ ಇಳಿಸುತ್ತಾನೆ. ನಿತ್ಯ 3 ಪೌಂಡ್ ಚಿಕನ್, ಒಂದು ಪೌಂಡ್ ಮೀನು, 4 ಪೌಂಡ್ ಬಾದಾಮಿ, 3 ಲೀಟರ್ ಪ್ರೊಟೀನ್ ಮಿಶ್ರಣ ಹಾಗೂ ಕಾರ್ಬೋಹೈಡ್ರೇಟ್ ಇತ್ಯಾದಿ ಈತನಿಗೆ ಆಹಾರವಾಗಿ ಬೇಕು.

■ ಸುಭಾಸ ಯಾದವಾಡ





